# <u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

**<u>ಸಿ.ಸಿ. ಸಂಖ್ಯೆ:</u>** <u>1215/2023</u>

**<u>ಪಿರ್ಯಾದಿ</u>** : ರಾಜ್ಯ, ಪರವಾಗಿ ಬಣಕಲ್ ಪೊಲೀಸ್ ಠಾಣೆ,
ಮೂಡಿಗೆರೆ ತಾಲ್ಲೂಕು.

**ವಿರುದ್ಧ**

**<u>ಆರೋಪಿತರು</u>** : 1. ನಂದೀಶ್ ಹೆಚ್.ಜಿ.
ಬಿನ್ ಗೋಪಾಲಗೌಡ,
ವಯಸ್ಸು ಸುಮಾರು 47 ವರ್ಷ.

2. ನವೀನ್ ಹೆಚ್.ಜಿ.
ಬಿನ್ ಗೋಪಾಲಗೌಡ,
ವಯಸ್ಸು ಸುಮಾರು 42 ವರ್ಷ.

ಆರೋಪಿತರಿಬ್ಬರೂ ವಾಸ: ಹ್ಯಾರಗುಡ್ಡೆ ಗ್ರಾಮ,
ಬಣಕಲ್ ಹೋಬಳಿ, ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

## <u>ದೋಷಾರೋಪಣೆ</u>

ಶ್ರೀ. ವಿಶ್ವನಾಥ್ ಎ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆ:–

ದಿನಾಂಕಃ 16.12.2022 ರಂದು ಬೆಳಗ್ಗೆ 10.30 ಗಂಟೆ ಸಮಯದಲ್ಲಿ ಚಾಸಾ-2 ಬಿ.ಬಿ.ಅಶೋಕ್ ರವರು ಚಾಸಾ-1 ಅಶ್ವಿನಿ ಬಿ.ಎ. ರವರೊಂದಿಗೆ ಬಕ್ಕಿ ಗ್ರಾಮದ ಸರ್ವೆ ನಂ.40 ರ ಕಾಫಿ ತೋಟದಲ್ಲಿ ಕೆಲಸ ಮಾಡಲು ಹೋಗಿದ್ದಾಗ ಆರೋಪಿತರಾದ ನೀವು ಸರ್ವೆ ನಂ.40 ರ ವಿವಾದವಿರುವ ಜಮೀನಿನ ಖಾತೆದಾರರಾದ ಪುಟ್ಟಸ್ವಾಮಿಗೌಡರವರ ಮೇಲೆ ಹಿತಾಸಕ್ತಿಯನ್ನು ಇಟ್ಟುಕೊಂಡು ಕಾಫಿ ಹಣ್ಣನ್ನು ಕೊಯ್ಯಲು ತಯಾರಿ ನಡೆಸುತ್ತಿದ್ದುದ್ದನ್ನು ಕಂಡು ಚಾಸಾ-1 ರವರು ನಮ್ಮ ತೋಟದಲ್ಲಿ ಕಾಫಿಯನ್ನು ಏಕೆ ಕೊಯ್ಯಲು ಬಂದಿದ್ದೀರಾ ಎಂದು ಕೇಳಿದ್ದಕ್ಕೆ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಕಾಫಿ ತೋಟದ ಒಳಗಿನಿಂದ ರಸ್ತೆಗೆ ಬಂದು, 2 ನೇ ಆರೋಪಿಯಾದ ನೀವು ಚಾಸಾ-1 ರವರನ್ನು ಉದ್ದೇಶಿಸಿ ಸೂಳೆ ಮಗನೆ ಇದು ಪುಟ್ಟಸ್ವಾಮಿಗೌಡರ ಕಾಫಿ ತೋಟ ಕೇಳಲು ನೀನು ಯಾರು ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು **ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, 2 ನೇ ಆರೋಪಿಯಾದ ನೀವು ಕೈಯಿಂದ ಚಾಸಾ-1 ಅಶ್ವಿನಿ ಯವರ ಎಡಕೆನ್ನೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ 2 ನೇ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

3. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, 2 ನೇ ಆರೋಪಿಯಾದ ನೀವು ಒಂದು ಸೀಬೆ ಮರದ ದೊಣ್ಣೆಯಿಂದ ಚಾಸಾ-1 ಅಶ್ವಿನಿ ಬಿ.ಎ. ರವರ ಎಡಮೊಣಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ ಹಾಗೂ 1 ನೇ ಆರೋಪಿಯಾದ ನೀವು ಕತ್ತಿಯ ಹಿಂಬದಿಯಿಂದ ಚಾಸಾ-1 ರವರ ಬಲಮೊಣಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು **ಭಾರತ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

4. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು ಚಾಸಾ-1 ಅಶ್ವಿನಿ ಬಿ.ಎ. ಮತ್ತು ಚಾಸಾ-2 ಬಿ.ಬಿ.ಅಶೋಕ್ ರವರನ್ನು ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು **ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

(ಆರೋಪಿತರಿಗೆ ದಿನಾಂಕ 17.10.2023 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

Sd/-

ಮೂಡಿಗೆರೆ
ದಿನಾಂಕಃ 17.10.2023

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.